**1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಬೆಳಗಾವಿ ಇವರ**

**ನ್ಯಾಯಾಲಯದಲ್ಲಿ ಬೆಳಗಾವಿ**

**SC. No: 162/2025**

**CW. No: 9**
**PW. No: 1**

ಸಾಕ್ಷಿದಾರರ ಹೆಸರು : ಪ್ರಕಾಶ ಸಂಕಣ್ಣವರ

ತಂದೆಯ ಹೆಸರು : ಉಳವಪ್ಪ ಸಂಕಣ್ಣವರ

ವಯಸ್ಸು : 31 ವರ್ಷ

ಉದ್ಯೋಗ : ಸೆಕ್ಯೂರಿಟಿ ಕೆಲಸ

ವಾಸ್ತವ್ಯ : ಗುರ್ಲಹೊಸೂರ, ತಾಃ ಸವದತ್ತಿ

ಇಂದು ದಿನಾಂಕಃ 25.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ -**

ನಾನು ಸವದತ್ತಿಯ ಎಪಿಎಮ್‌ಸಿಯಲ್ಲಿ ಕಳೆದ 8 ವರ್ಷಗಳಿಂದ ಸೆಕ್ಯೂರಿಟಿ ಎಂದು ಕೆಲಸ ಮಾಡುತ್ತಿದ್ದೇನೆ. ನನ್ನ ಕೆಲಸದ ಅವಧಿ ರಾತ್ರಿ 08.00 ಗಂಟೆಯಿಂದ ಬೆಳಗ್ಗೆ 08.00 ಗಂಟೆಯವರೆಗೆ ಇರುತ್ತದೆ.

2. ದಿನಾಂಕ 04.06.2025ರಂದು ರಾತ್ರಿ 12.00 ಗಂಟೆ ಸಮಯದಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಮೃತ ವ್ಯಕ್ತಿಯು ಎಪಿಎಮ್‌ಸಿ ಗೇಟನ ಮುಂದೆ ಮೂತ್ರ ವಿಸರ್ಜನೆಗೆಂದು ಬಂದಿದ್ದನು. ಅವನು ಮೂತ್ರ ವಿಸರ್ಜನೆಗೆ ಬಂದಿದ್ದೇನೆ ಎಂದು ಹೇಳಿದ್ದರಿಂದ ಬೈದು ಕಳುಹಿಸಿ ನಾನು ಗೇಟ ಲಾಕ್ ಮಾಡಿದೆ. ಬೆಳಗ್ಗೆ 07.00 ಗಂಟೆಗೆ ಆವರಣದ ಸುತ್ತಲೂ ಚೆಕ್ ಮಾಡಲು ಹೋದಾಗ ರಾತ್ರಿ ಮೂತ್ರ ವಿಸರ್ಜನೆ ಮಾಡಲು ಬಂದ ವ್ಯಕ್ತಿಯು ವೇಬ್ರಿಡ್ಜ ಪಕ್ಕದಲ್ಲಿರುವ ಕಟ್ಟೆಯ ಮೇಲೆ ಮಲಗಿಕೊಂಡಿದ್ದನು. ನಾನು ಹತ್ತಿರ ಹೋಗಿ ನೋಡಿದಾಗ ವ್ಯಕ್ತಿಯು ರಕ್ತದ ಮಡಲಿನಲ್ಲಿ ಬಿದ್ದಿದ್ದನು. ಅಲ್ಲಿ ಎರಡು ಕಲ್ಲು ಹಾಗೂ ಒಂದು ಇಟ್ಟಿಗೆ ಬಿದ್ದಿದ್ದವು. ಅವನಿಗೆ ತಲೆಗೆ ಕಲ್ಲಿನಿಂದ ಜಜ್ಜಿದ ಗಾಯವಾಗಿತ್ತು. ನಾನು ನನ್ನ ಎಪಿಎಮ್‌ಸಿ ಅಧಿಕಾರಿಗಳಿಗೆ ಮತ್ತು ಚಾಸಾ.10ರವರಿಗೆ ಪೋನ ಮಾಡಿ ತಿಳಿಸಿದೆನು. ಎಪಿಎಮ್‌ಸಿ ಕಛೇರಿಯಿಂದ ಪೋಲಿಸರಿಗೆ ಪೋನ

ಮಾಡಿ ವಿಷಯ ತಿಳಿಸಿದ್ದು, ನಂತರ ಪೋಲಿಸರು ಸ್ಥಳಕ್ಕೆ ಬಂದಿರುತ್ತಾರೆ. ಸ್ಥಳಕ್ಕೆ ಬಂದ ಪೋಲಿಸರು ಸ್ಥಳ ಪರಿಶೀಲಿಸಿರುತ್ತಾರೆ. ಸ್ಥಳಕ್ಕೆ ಬೇರೆ ಯಾರೂ ಬಂದಿರುವುದಿಲ್ಲ.

3. ನಾನು ಯಾವುದೇ ಸಿಸಿಟಿವಿ ಪೂಟೇಜ್ ನೋಡಿರುವುದಿಲ್ಲ, ಮೃತ ವ್ಯಕ್ತಿ ಯಾರು ಎಂದು ನನಗೆ ತಿಳಿದಿರುವುದಿಲ್ಲ. ಸದರಿ ವ್ಯಕ್ತಿಯನ್ನು ಯಾರು ಕೊಲೆ ಮಾಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿರುವುದಿಲ್ಲ. ಮೃತ ದೇಹದ ಪಕ್ಕದಲ್ಲಿ ಬಿದ್ದ ಕಲ್ಲುಗಳನ್ನು ಮತ್ತು ಇಟ್ಟಿಗೆಯನ್ನು ನೋಡಿದರೆ ಗುರುತಿಸುತ್ತೇನೆ. (ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ವಸ್ತುವನ್ನು ತೋರಿಸಲು ಅನುಮತಿ ಕೋರಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸುವುದಾಗಿ ಹೇಳಿದ್ದರಿಂದ , ಬಿಳಿ ಬಟ್ಟೆಯಲ್ಲಿ ಸುತ್ತಿ, ಸೀಲು ಮಾಡಿದ ಕಲ್ಲುಗಳನ್ನು ತೆರೆದ ನ್ಯಾಯಾಲಯದಲ್ಲಿ ಕತ್ತರಿಸಿ ತೆರೆದು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅವುಗಳನ್ನು ಗುರುತಿಸಿದ ಮೇರೆಗೆ ಈ ಕೆಳಗಿನಂತೆ ಗುರುತಿಸಲಾಯಿತು.)

1. ಒಂದು ದೊಡ್ಡ ಕಲ್ಲು - ಮುಮಾ.1
2. ಮಧ್ಯಮ ಗಾತ್ರದ ಕಲ್ಲು - ಮುಮಾ.2
3. ಒಂದು ಇಟ್ಟಿಗೆ - ಮುಮಾ.3

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ** ಪಾಟೀ **ಸವಾಲು ಮಾಡಲು ಅಭಿಯೋಜಕರು ಅನುಮತಿ ಕೋರಿದ ಮೇರೆಗೆ ಅನುಮತಿಯನ್ನು ನೀಡಲಾಯಿತು.)**

<u>ಪಾಟೀ **ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**</u>

4. ಚಾಸಾ.10ರವರು ಸ್ಥಳಕ್ಕೆ ಬಂದ ನಂತರ ವಾಟ್ಸಾಪ್ ಗ್ರುಪ್‌ನಲ್ಲಿ ನಾವು ಶವದ ಪೋಟೋ ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ನಂತರ ಮೃತನ ಹೆಸರು ಮುಕ್ತುಮಸಾಬ ನದಾಫ ಎಂದು

ತಿಳಿದುಬಂದಿರುತ್ತದೆ ಎಂದರೆ ಸರಿ. ನಂತರ ಸ್ಥಳಕ್ಕೆ ಮೃತನ ಹೆಂಡತಿ ರುಕ್ಸಾನಭಾನು ಮತ್ತು ಆತನ ಸಂಬಂಧಿಕರು ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸರಿ. ನಂತರ ಸಿಸಿಟಿವಿ ಫೂಟೇಜನ್ನು ನಾನು ನೋಡಿದ್ದು, ವಿಡಿಯೋದಲ್ಲಿ ಮೃತನು ಮತ್ತು ಆರೋಪಿಯು ಓಡಾಡಿರುವುದು ಕಂಡುಬಂದಿರುತ್ತದೆ ಎಂದರೆ ಸರಿ. ಹಿಂದಿನ ದಿನ ರಾತ್ರಿ ಗೇಟ ಹತ್ತಿರ ನಾನು ನೋಡಿದ್ದು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಎಂದರೆ ಸರಿಯಲ್ಲ. ಸಿಸಿಟಿವಿ ಫೂಟೇಜನಲ್ಲಿ ಮೃತ ಮತ್ತು ಆರೋಪಿಯು ಒಂದು ಫ್ಲಾಂಟನ್ನು ಆಕಡೆಯಿಂದ ಈಕಡೆಗೆ ಒಗೆದಾಡುವುದು ಕಂಡುಬಂದಿರುತ್ತದೆ ಎಂದರೆ ಸರಿ. ನಂತರ ಆರೋಪಿಯು ಒಂದು ಕಲ್ಲನ್ನು ತೆಗೆದುಕೊಂಡು ಬಂದಿರುವುದು ವಿಡಿಯೋದಲ್ಲಿ ಕಂಡುಬಂದಿರುತ್ತದೆ ಎಂದರೆ ಸರಿ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಮೃತನನ್ನು ಕೊಲೆ ಮಾಡಿರುವುದು ನಮಗೆ ತಿಳಿದುಬಂದಿರುತ್ತದೆ ಎಂದರೆ ಸರಿ. ಪೋಲಿಸರ ಸಮಕ್ಷಮ ನಾನು ರಾತ್ರಿ ಭೇಟಿಯಾದವನು ಆರೋಪಿ, ಮೃತನು ಅಲ್ಲ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ಪೋಲಿಸರ ಸಮಕ್ಷಮ, 'ನನಗೆ ರಾತ್ರಿ ಭೆಟ್ಟಿಯಾಗಿದ್ದ ವ್ಯಕ್ತಿಯ ಹೆಸರು ಮಹ್ಮದರಫೀಕ ಅಬ್ದುಲರೆಹಮಾನ ಮೆಣಸಿನಕಾಯಿ ಸಾಃ ಸಾಯಿ ನಗರ ಮುನವಳ್ಳಿ ಅಂತಾ ತಿಳಿಯಿತು.' ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-1 ಎಂದು ಗುರುತಿಸಲಾಯಿತು. ನಂತರ ನನಗೆ ಮೃತನು ಆರೋಪಿಯ ಕಡೆಯಿಂದ ಸಾಲ ಪಡೆದಿದ್ದನು, ಸಾಲದ ವಿಷಯವಾಗಿ ಜಗಳವಾಗಿರುವುದಾಗಿ ಪೋಲಿಸರ ಮುಂದೆ ಹೇಳಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಎಸ್ ಜಿ ವಕೀಲರಿಂದಃ**

ಸವದತ್ತಿಯ ಎಪಿಎಮ್‌ಸಿಯಲ್ಲಿ ನಾನೊಬ್ಬನೇ ಸೆಕ್ಯೂರಿಟಿ ಇದ್ದು, 3 ಗೇಟಗಳು ಇರುತ್ತವೆ. ಹಗಲು 08.00 ಗಂಟೆಯಿಂದ ಬೇರೆ ವಾಚಮನ್ ಕೆಲಸಕ್ಕೆ ಸೇರುತ್ತಾರೆ. ಬೆಳಗ್ಗೆ 08.00 ಗಂಟೆ ನಂತರ ನಾನು ನನ್ನ ವೈಯಕ್ತಿಕ ಕೆಲಸಕ್ಕೆ ಹೋಗುತ್ತೇನೆ. ಶವವನ್ನು ನೋಡಿದ ನಂತರ ನಾನು ಅಧಿಕಾರಿ ಮತ್ತು ಚಾಸಾ.10ರವರಿಗೆ ತಿಳಿಸಿ ನಾನು ಮನೆಗೆ ಹೋಗಿರುತ್ತೇನೆ, ಉಳಿದ ವಿಷಯ ನನಗೆ ಗೊತ್ತಿಲ್ಲ ಎಂದರೆ

ಸರಿಯಲ್ಲ. ನನ್ನ ಸೆಕ್ಯೂರಿಟಿ ಕೆಲಸಕ್ಕೆ ತೊಂದರೆಯಾಗುತ್ತದೆ ಎಂಬ ಕಾರಣದಿಂದ ನನಗೆ ಯಾವುದೇ ವಿಷಯ ತಿಳಿಯದೇ ಇದ್ದರೂ ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಿಸಿಟಿವಿ ಫೂಟೇಜನ್ನು ನೋಡಿರುತ್ತೇನೆ, ಫೂಟೇಜನಲ್ಲಿ ವಿಡಿಯೋಗಳನ್ನು ನೋಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಿಸಿಟಿವಿ ಫೂಟೇಜನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಮುಮಾ.1 ರಿಂದ 3 ಇವುಗಳಲ್ಲಿ ಯಾವ ಕಲ್ಲಿನಿಂದ ಹಲ್ಲೆ ಮಾಡಲಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ಮುಮಾ.1 ರಿಂದ 3 ತರಹದ ಕಲ್ಲುಗಳು ಶವ ಬಿದ್ದ ಸ್ಥಳದಲ್ಲಿ ಮತ್ತು ಎಪಿಎಮ್‌ಸಿ ಆವರಣದಲ್ಲಿ ಸಿಗುತ್ತವೆ ಎಂದರೆ ಸರಿ. ಮುಮಾ.1 ರಿಂದ 3 ಇವುಗಳನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಸುಭಾಷ ಸಂಕದ)
1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಬೆಳಗಾವಿ.